(ಇಂದು ದಿನಾಂಕಃ 31-05-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆಃ ಶ್ರೀ.ವಿ.ವಿ.ಸಿ ಎದುರುದಾರರ ಪರವಕೀಲರಿಂದ**

1. ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಂತಹ ವಿಷಯಗಳು ಸರಿಯಾಗಿವೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

- ಎಮ್.ಎಲ್.ಸಿ ವರದಿಯನ್ನು ಹಾಗೂ ಆಸ್ಪತ್ರೆಯ ದಾಖಲೆಗಳನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್-1 ಎಂದು, ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ.ಡಿ.ಪಿ ಅರ್ಜಿದಾರ ಪರ ವಕೀಲರಿಂದಃ**

1. ಅಪಘಾತದ ಘಟನಾ ಸ್ಥಳಕ್ಕೆ ನಾನು ವೈಯಿಕ್ತಿಕವಾಗಿ ಭೇಟಿ ಮಾಡಿಲ್ಲ. ಆ ದಿನ ದ್ವಿಚಕ್ರ ವಾಹನವನ್ನು ಯಾರು ನಡೆಸುತ್ತಿದ್ದರು ಎಂದು ಮೃತ ವ್ಯಕ್ತಿಯ ಸಂಬಂಧಿಕರನ್ನು ನಾನು ವೈಯಕ್ತಿಕವಾಗಿ ವಿಚಾರಣೆ ಮಾಡಿಲ್ಲ. ದೂರು ದಾಖಲಿಸಿ ಕೆವಲ 3 ದಿನ ತಡವಾಗಿದ್ದರು ಸಹ ನಾನು 5 ದಿನ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಾಯ ಗೊಂಡ ವ್ಯಕ್ತಿಯು ಗಂಭೀರ ಸ್ಥಿತಿಯಲ್ಲಿ ಇದ್ದರಿಂದ ಅವರ ಸಂಬಂಧಿಕರಿಗೆ ದೂರು ಕೊಡಲು ತಡವಾಗಿದೆ ಎಂದರೆ ಸರಿಯಲ್ಲ. ಘಟನೆಯಾಗಿ 5 ದಿನಗಳ ನಂತರ ಗಾಯಗೊಂಡ ವ್ಯಕ್ತಿ ತೀರಿಕೊಂಡನು ಎಂದರೆ ಸಾಕ್ಷಿ ಅವನು ತೀರಿಕೊಂಡಿರ ಬಹುದು ಆದರೆ ಅಪಘಾತ ನಮ್ಮ ವಾಹನದಿಂದ ಆಗಿಲ್ಲ ಎಂದು ಹೇಳುತ್ತಾರೆ. ಪ್ರ.ವ.ವರದಿಯ ಹಾಗೂ ಅಂತಿಮ ವರದಿಯ ಪ್ರಕಾರ ಸೇಡಂ ತಾಲೂಕಿನ ಆಬಾಳ ಗ್ರಾಮದಲ್ಲಿ ಅಪಘಾತ ಆಗಿದೆ ಎಂದರೆ ಸಾಕ್ಷಿಯು ಎಮ್.ಎಲ್.ಸಿ ವರದಿಯ ಪ್ರಕಾರ ಗುಲ್ಬರ್ಗಾದ ಹತ್ತಿರ ಅಪಘಾತ ಆಗಿದೆ ಎಂದು ಹೇಳುತ್ತಾರೆ. ನಮ್ಮ ಪ್ರಕಾರ ಆ ದಿನ ದ್ವಿಚಕ್ರ ವಾಹನವನ್ನು ಯಾರು ನಡೆಸುತ್ತಿದ್ದರು ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಆದರೆ ಅಪಘಾತ ನಮ್ಮ ವಾಹನದಿಂದ ಆಗಿಲ್ಲ ಎಂದು ಹೇಳುತ್ತಾರೆ. ಮೃತ ವ್ಯಕ್ತಿಯು ಮಧ್ಯಪಾನ ಮಾಡಿದ್ದರು ಎಂದು ಯಾವ ಆಧಾರದ ಮೇಲೆ ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ಎಮ್.ಎಲ್.ಸಿ ವರದಿಯ ಪ್ರಕಾರ ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಮೃತ ವ್ಯಕ್ತಿಯ ರಕ್ತದಲ್ಲಿ ಶೇಕಡ

ಎಷ್ಟು ಪ್ರಮಾಣ ಮಧ್ಯ ಇತ್ತು ಬರೆದಿಲ್ಲ ಎಂದರೆ ಸಾಕ್ಷಿಯು ಎಮ್.ಎಲ್.ಸಿ ವರದಿಯಲ್ಲಿ ಬರೆದಿಲ್ಲ ಎಂದು ಹೇಳುತ್ತಾರೆ. ಮೃತ ವ್ಯಕ್ತಿಯ ರಕ್ತದ ಪರೀಕ್ಷೆ ಮಾಡಲು ಸ್ಯಾಂಪಲ್ ಯಾವಾಗ ತೆಗೆದುಕೊಂಡರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ, ಅದು ವೈದ್ಯರಿಗೆ ಸಂಬಂಧ ಪಟ್ಟದ್ದು ಎಂದು ಹೇಳುತ್ತಾರೆ. ಶವ ಪರೀಕ್ಷೆ ವರಿದಿಯಲ್ಲಿ ಮೃತ ವ್ಯಕ್ತಿಯು ಮಧ್ಯಪಾನ ಮಾಡಿದ್ದರು ಎಂದು ಬರೆದಿಲ್ಲ ಎಂದರೆ ಸಾಕ್ಷಿಯು ಅದರಲ್ಲಿ ವಾಹನದಿಂದ ಅಪಘಾತ ಆಗಿದೆ ಎಂದು ಸಹ ಬರೆದಿಲ್ಲ ಎಂದು ಹೇಳುತ್ತಾರೆ. ಮೃತ ವ್ಯಕ್ತಿಯು ದ್ವಿಚಕ್ರ ವಾಹನ ಹಿಂದೆ ಕುಳಿತಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಧ್ಯ ಪ್ರಮಾಣವನ್ನು ನಿಖರವಾಗಿ ಪರೀಕ್ಷೆ ಮಾಡಬೇಕಾದರೆ ಮಾದರಿಯನ್ನು ತೆಗೆದುಕೊಂಡು ಮಾಡಬೇಕಾಗುತ್ತದೆ ಎಂದರೆ ಅದು ವೈದ್ಯರಿಗೆ ಸಂಬಂಧ ಪಟ್ಟದ್ದು ಎಂದು ಹೇಳುತ್ತಾರೆ. ನಾನು ಕಂಪನಿಯ ನೌಕರಾನಾಗಿದ್ದು, ಪರಿಹಾರವನ್ನು ಕೊಡಬಾರದು ಅನ್ನುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.